ಅ) ಭಟ್ಕಳದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕಛೇರಿಯಲ್ಲಿ ತಾಂತ್ರಿಕ ಸಿಬ್ಬಂದಿಗಳನ್ನು ಯಾವಾಗ ನೇಮಿಸಲಾಗುವುದು?

ಶ್ರೀ ಶರಣಪ್ಪ ಬಸಪ್ಪದರ್ಶನಾಪುರ್ (ಇಂಧನಾ ರಾಜ್ಯ ಸಚಿವರು) :

ಅ) ಈಗಾಗಲೇ ಮಂಡಳಿಯು ಸಹಾಯಕ ಇಂಜಿನಿಯರ್, ಮಾಪಕ ಓದುಗಾರ, ಆಪರೇಟರ್, ಓವರ್ ಸಿಯರ್, ಸಹಾಯಕ ಲೈನ್‌ಮನ್ ಹುದ್ದೆಗಳ ನೇಮಕಾತಿಗೆ ಅರ್ಜಿಗಳನ್ನು ಕರೆಯಲಾಗಿದೆ. ಆದುದರಿಂದ ಆದಷ್ಟು ಶೀಘ್ರದಲ್ಲಿ ನೇಮಕಾತಿಯಲ್ಲಿ ಪ್ರಕ್ರಿಯೆಗಳು ಮುಗಿದ ನಂತರ ಭಟ್ಕಳ ಕಛೇರಿಯಲ್ಲಿ ತಾಂತ್ರಿಕ ಸಿಬ್ಬಂದಿಗಳನ್ನು ಭರ್ತಿ ಮಾಡುವ ಕ್ರಮ ಕೈಗೊಳ್ಳಲಾಗುವುದು.

ಅನುಕಂಪದ ಆಧಾರದ ಮೇಲೆ ಈಗಾಗಲೇ ಕೆಲವು ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಕಡವಿನ ಕಟ್ಟೆ ಅಣೇಕಟ್ಟು ದುರಸ್ತಿ

1746 - ಶ್ರೀ ಶಿವಾನಂದ ನಾಯ್ಕ್ (ಭಟ್ಕಳ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡವಿನಕಟ್ಟೆ ಅಣೆಕಟ್ಟು (ಡ್ಯಾಂ) ದುರಸ್ತಿಗಾಗಿ ಸರ್ಕಾರದಿಂದ ಮಂಜೂರಾಗಿರುವ ಒಟ್ಟು ಅನುದಾನ ಎಷ್ಟು?

ಆ) ಇಲ್ಲಿಯವರೆಗಿನ ಖರ್ಚು ಎಷ್ಟು? (ವರ್ಷವಾರು ವಿವರಗಳನ್ನೊದಗಿಸುವುದು)

ಇ) ಕಾಮಗಾರಿಯು ವಿಳಂಬವಾಗಲು ಕಾರಣಗಳೇನು?

ಈ) ಈ ಕಾಮಗಾರಿಯು ಯಾವಾಗ ಮುಗಿಯುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಕಡವಿನಕಟ್ಟೆ ಅಣೆಕಟ್ಟು ದುರಸ್ತಿಗಾಗಿ 1996-97ರಲ್ಲಿ ರೂ. 2.00 ಲಕ್ಷ ಮತ್ತು 1997-98ನೇ ಸಾಲಿನಲ್ಲಿ ರೂ. 1.50 ಲಕ್ಷ ಒಟ್ಟು 3.50 ಲಕ್ಷ ರೂಗಳ ಅನುದಾನ ಒದಗಿಸಲಾಗಿದೆ.

ಆ) 1996-97ನೇ ಸಾಲಿನಲ್ಲಿ ರೂ. 1.07 ಲಕ್ಷ ಮತ್ತು 1997-98ನೇ ಸಾಲಿನಲ್ಲಿ ರೂ. 1.93 ಲಕ್ಷ ರೂ. ಒಟ್ಟು 3.00 ಲಕ್ಷ ರೂ. ವೆಚ್ಚ ಮಾಜಲಾಗಿದೆ.

ಇ) ಕಡವಿನಕಟ್ಟೆ ಅಣೆಕಟ್ಟನ್ನು ವೆಂಕಟಾಪುರ ನದಿಗೆ ಅಡ್ಡಲಾಗಿ ಕಟ್ಟಿದ್ದು, ಈ ನದಿಯಲ್ಲಿ ಸುಮಾರು 11 ತಿಂಗಳ ಕಾಲ ನೀರು ಹರಿವಿನ ಪ್ರಯಾಣ ಹೆಚ್ಚು ಇರುತ್ತದೆ. ಈ ಅಣೆಕಟ್ಟಿನ ಮೇಲ್ಭಾಗದಲ್ಲಿ ಭಟ್ಕಳ ಪುರಸಭೆಯವರು ಭಟ್ಕಳ ನಗರಕ್ಕಾಗಿ ನೀರು ಸರಬರಾಜು ಮಾಡುತ್ತಿದ್ದು, ಅಣೆಕಟ್ಟು ದುರಸ್ತಿಗಾಗಿ ನೀರು ಖಾಲಿ ಮಾಡಲು ಹೋದಾಗ ಪುರಸಭೆಯವರು ಆಕ್ಷೇಪಿಸಿದ್ದರಿಂದ ಕೆಲಸವು ಒಂದು ವರ್ಷ ಕಾಲ ವಿಳಂಬವಾಯಿತು. ಮತ್ತು 96-97ನೇ ಸಾಲಿನಲ್ಲಿ ಬರೀ ಎರಡು

ತಿಂಗಳು ಮಾತ್ರ ಕಾರ್ಯ ಸಾಧ್ಯವಾದ್ದರಿಂದ 68 ಮೀಟರ್ ನಷ್ಟು ಉದ್ದದ ಅಣೆಕಟ್ಟಿನ ಭಾಗಕ್ಕೆ ಸುಧಾರಣೆ ಮಾಡಲಾಗಿದೆ.

ಈ) 1998ನೇ ಮಾರ್ಚ್‌ರಿಂದ ಜೂನ್ ಅವಧಿಯ ಒಳಗಾಗಿ ಮುಗಿಸಬಹುದಾಗಿದೆ.

ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರವು ಪಡೆಯುತ್ತಿರುವ ಆಹಾರ ದಾನ್ಯಗಳ ವಿವರ

1747 - Sri S. Suresh Kumar (Rajajinagar) : Will the Hon'ble Minister for Food and Civil Supplies be Pleased to State?

a) *Quantity of rationed articles received by the state from the Centre every year. (Rice, Wheat, Sugar, Kerosene and P.oil). (Last five years figures may be furnished).*

b) *What is the number of Ration Cards in the State (Give details for five years?*

c) *What is the reason for reduction in the quantum of rations to each of the card holders?*

Sri. G. BASAVANAPPA (Hon'ble Minister for Food and Civil Supplies) :

a) Quantum of Rationed Articles received by the Central to the state in the last five years :

(Flg. in M.Ts.)

Year	Rice	Wheat	Sugar	K.Oil	P.Oil
92-93	303200	300000	231056	573881	9632
93-94	828500	295000	221897	575191	2700
94-95	1264980	360000	218852	581714	2500
95-96	1443120	360000	225577	615095	11840
96-97	1451120	358000	243463	651228	23506